## ಅಭಿನಯ ಶಾರದೆಯರು

ನಟನೆಯ ಪರಂಪರೆಯಲ್ಲಿ ಎದ್ದುಕಾಣುವ ಹೆಸರು ಕಲ್ಪನಾ ಅವರದು. ಅವರಷ್ಟು ವರ್ಚಸ್ಸು ರೂಢಿಸಿಕೊಂಡ, ದೀರ್ಘಕಾಲದವರೆಗೆ ಜನಮನ್ನಣೆ ಪಡೆದ ಇನ್ನೊಬ್ಬ ನಟಿ ಕನ್ನಡ ಸಿನಿಮಾ ಚರಿತ್ರೆಯಲ್ಲಿಲ್ಲ. 'ಸಾಕುಮಗಳು' ಮೊದಲ ಚಿತ್ರವಾದರೂ, ಅವರ ಪ್ರತಿಭೆ ಸಹೃದಯರ ಗಮನಕ್ಕೆ ಬಂದದ್ದು 'ಬೆಳ್ಳಿಮೋಡ' ಚಿತ್ರದ ಮೂಲಕ. ಅನೇಕ ಚಿತ್ರಗಳಲ್ಲವರು ಭಾವುಕತೆ ಸ್ಫೋಟಿಸಿದಂತೆ ನಟಿಸಿದರು. ಕಣ್ಣು ಕೋರೈಸುವ ಸೌಂದರ್ಯ ಇಲ್ಲದಿದ್ದರೂ ತಮ್ಮದೇ ಆದ ನಟನೆಯ ಶೈಲಿಯೊಂದನ್ನು ಸೃಷ್ಟಿಸಿಕೊಳ್ಳುವ ಮೂಲಕ ಕಲ್ಪನಾ ಪ್ರೇಕ್ಷಕರನ್ನು ಮರುಳು ಮಾಡಿದ್ದರು. 'ಮಿನುಗುತಾರೆ' ಎನ್ನುವುದು ಅವರ ಸಿನಿಮಾ, ಬದುಕು ಎರಡಕ್ಕೂ ಹೊಂದುವ ವಿಶೇಷಣ. ಪ್ರೇಮದ ಹಂಬಲ, ಸುಂದರ ಬದುಕಿನ ಕನಸು, ಗಂಡಿನ ವಂಚನೆ ಮತ್ತು ನಿರ್ಲಕ್ಷ್ಯಕ್ಕೆ ಗುರಿಯಾದ ಹೆಣ್ಣಿನ ಅಂತರಂಗದಲ್ಲಿ ಉಂಟಾಗುವ ಕೋಲಾಹಲಕ್ಕೆ ಕಲ್ಪನಾ ಪಾತ್ರಗಳು ಜೀವ ತುಂಬಿದ್ದವು. 'ಶರಪಂಜರ', 'ಮುಕ್ತಿ', 'ಸರ್ವಮಂಗಳಾ', 'ಗಂಧದ ಗುಡಿ', 'ಬಯಲು ದಾರಿ', 'ಎರಡು ಕನಸು' ಅವರ ಜನಪ್ರಿಯ ಚಿತ್ರಗಳು.


ಲೀಲಾವತಿ ಮತ್ತು ಕಲ್ಪನಾ


ಆರತಿ–ಜಯಂತಿ


ಸರೋಜಾದೇವಿ

ಕನ್ನಡದ ಒಂದು ತಲೆಮಾರಿನ ಹೆಣ್ಣುಮಕ್ಕಳ ಕನಸುಗಳ ಮೂರ್ತರೂಪ–ದಂತೆ ಕಾಣುವ ಮತ್ತೊಬ್ಬ ನಟಿ ಎನ್. ಭಾರತಿ 'ನೋಡಲಿಕ್ಕೆ ಭಾರತಿಯಂತೆ ಇದ್ದಾಳೆ' ಎನ್ನುವ ಮಾತು ಸೌಂದರ್ಯದ ಮಾನದಂಡದಂತೆ ಜನಸಾಮಾನ್ಯರ ನಡುವೆ ಬಳಕೆಯಲ್ಲಿತ್ತು. 'ಲವ್ ಇನ್ ಬೆಂಗಳೂರು', 'ದುಡ್ಡೇ ದೊಡ್ಡಪ್ಪ', 'ಮಧು ಮಾಲತಿ', 'ಎಮ್ಮೆ ತಮ್ಮಣ್ಣ', 'ಅಮ್ಮ', 'ಬೀದಿ ಬಸವಣ್ಣ' ಅವರ ಆರಂಭದ ಚಿತ್ರಗಳು. ಅರವತ್ತು ಎಪ್ಪತ್ತರ ದಶಕದಲ್ಲಿ ರಾಜ್–ಭಾರತಿ ಬೆಳ್ಳಿತೆರೆಯ ಅಪೂರ್ವ ಜೋಡಿ ಎನ್ನುವಂತೆ ಚಿತ್ರರಸಿಕರಿಗೆ ಕಾಣಿಸಿತು. 'ಶ್ರೀಕೃಷ್ಣದೇವರಾಯ', 'ಬಂಗಾರದ ಮನುಷ್ಯ', 'ಹೃದಯ ಸಂಗಮ', 'ದೂರದ ಬೆಟ್ಟ'– ಭಾರತಿ ನಟನೆಯ ಕೆಲವು ಜನಪ್ರಿಯ ಚಿತ್ರಗಳು.

ಜಯಂತಿ ಅವರದು ರತಿ ವರ್ಚಸ್ಸಿನ ಮಾದಕ ಸೌಂದರ್ಯ. 'ಜೇನುಗೂಡು' (1963) ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ ಜಯಂತಿ, ವಿಭಿನ್ನ ಚಿತ್ರಗಳಲ್ಲಿ ನಟಿಸುವ ಮೂಲಕ ಹೆಸರು ಮಾಡಿದ ಕಲಾವಿದೆ. ಎಂ.ಆರ್. ವಿಠಲ್ ಅವರ 'ಮಿಸ್ ಲೀಲಾವತಿ' (1965) ಜಯಂತಿ ಅವರ ಪ್ರತಿಭೆಯ ಅನಾವರಣಕ್ಕೆ ಮುನ್ನುಡಿ ಬರೆದಂತೆ ಕಾಣಿಸುವ ಸಿನಿಮಾ.

ಜಯಂತಿ ಅವರಿಗೂ ಮೊದಲು 'ಜಗನ್ಮೋಹಿನಿ'ಸಿನಿಮಾದಲ್ಲಿ ಹರಿಣಿ ರೋಚಕವಾಗಿ ಕಾಣಿಸಿಕೊಂಡಿದ್ದರೂ, ರತಿವರ್ಚಸ್ಸಿನ ಪಾತ್ರಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಿಭಾಯಿಸಿದ್ದು ಜಯಂತಿ. 'ಬೆಟ್ಟದ ಹುಲಿ', 'ಜೇಡರ ಬಲೆ' ಚಿತ್ರಗಳಲ್ಲಿನ ಅವರ ಪಾತ್ರಗಳು ಆ ಕಾಲಕ್ಕೆ ರೋಚಕವಾಗಿದ್ದವು. 'ಚೂರಿ